ಲೇಖನ 05

# ಜೌಗು ಭೂಮಿ - ಒಂದು ಜೈವಿಕ ನೆಲೆ

ಜೌಗು ಭೂಮಿಗಳು ಸದಾ ನೀರು ಹರಿಯುವ ತಗ್ಗು ಪ್ರದೇಶಗಳು. ಈ ಜೌಗು ಭೂಮಿಯು ನೈಸರ್ಗಿಕ ಸ್ಪಂಜಿನಂತೆ ಕಾರ್ಯ ನಿರ್ವಹಿಸುತ್ತವೆ ಮಳೆಗಾಲದಲ್ಲಿ ಇಂಗಿದ ನೀರು ಬೇಸಿಗೆಯಲ್ಲಿ ಸ್ವಲ್ಪ ಸ್ವಲ್ಪವೇ ಅಸರಿ ಹಳ್ಳಗಳ ರೂಪತಾಳಿ ಕೊನೆಗೆ ನದಿಗಳ ಮೂಲಕ್ಕೆ ಕಾರಣವಾಗುತ್ತೆದೆ. ಸದಾ ನೀರಿನಿಂದಲೇ ಆವೃತವಾದ ಈ ಜಾಗಗಳು ಬೇರೆಲ್ಲೂ ಕಾಣಸಿಗದ ಸಸ್ಯ ಹಾಗೂ ಪ್ರಾಣಿಗಳಿಗೆ ನೆಲೆಯಾಗಿವೆ.

ಪಶ್ಚಿಮ ಘಟ್ಟದ ಬೆರಳೆಣಿಕೆಯಷ್ಟು ಪ್ರದೇಶಗಳಲ್ಲಿ ಕಾಣಸಿಗುವ ಜಾಯಿಕಾಯಿ ಕುಟುಂಬಕ್ಕೆ ಸೇರಿದ, ಡೈನೊಸಾರಸ್ ಕಾಲದಿಂದಲೂ ತಮ್ಮ ಮೂಲ ಸ್ವರೂಪವನ್ನು ಉಳಿಸಿಕೊಂಡು ಬಂದ ರಾಮಪತ್ರೆ ಮರ ಸಸ್ಯ ಶಾಸ್ತ್ರಿಯಾವಾಗಿ (Meristica mangifera) ಎಂದು ಕರೆಸಿಕೊಳ್ಳುವ ಮರವು ತನ್ನ ಮಡಚಿದ ಮೊಣಕಾಲಿನಂತಹ ಬೇರುಗಳನ್ನು ರಚನೆಯಿಂದ ವಿಶಿಷ್ಟ ಹಾಗೂ ಅಪುರೂಪವಾಗಿದೆ.


ಚಿತ್ರ ಕೃಪೆ: ಅಭಿಷೇಕ ಕಮದೋಡ

ಮಳೆಗಾಲದಲ್ಲಿ ನೀರಿನ ಮಟ್ಟವು 3 ರಿಂದ 4 ಅಡಿ ಎತ್ತರದವರೆಗೂ ತಲುಪವುದರಿಂದ ಬೇರುಗಳ್ಳನ್ನ 4 ಅಡಿ ಎತ್ತರದಿಂದಲೂ ನೆಲಕ್ಕೆ ಚಾಚಿರುತ್ತದೆ.

ಈ ರಾಮಪತ್ರೆ ಮರದ ಕಾಯಿಯ ಮೇಲಿನ ಹೂವಿನಂತಹ ರಚನೆಗೆ ಹೆಚ್ಚಿನ ಬೇಡಿಕೆ ಇದ್ದು ತನ್ನ ಸುತ್ತಲಿನ ಜನರನ್ನು ಆರ್ಥಿಕವಾಗಿಯು ಪೊಷಿಸುತ್ತಿದೆ. ಇನ್ನು ರಾಮಪತ್ರೆ ಮರಗಳ ಜೊತೆ ಹೊಂದಿಕೊಂಡಂತೆ ಬೆಳೆಯುವ ಇನ್ನೊಂದು ಮರ ಒಂದಂಕಿ ಮರ ಇದು ಕೂಡ ನೆಲದಿಂದ ಕನ್ನಡದ ಒಂದಂಕಿಯಂತಹ ಬೇರುಗಳನ್ನು ಬಿಟ್ಟಿರುವುದರಿಂದ ಒಂದಂಕಿ ಮರವೆಂದೇ ಪ್ರಸಿದ್ಧ.

ಇನ್ನು ಜೌಗು ಭೂಮಿಗಳಲ್ಲಿ ಕಂಡು ಬರುವ ಇನ್ನೊಂದು ಮರ ಬನಾಟೆ ಮರ (Lophophetalum wighitianum) ಬೃಹದಾಕಾರವಾಗಿ ಬೆಳೆಯುವ ಈ ಮರವು ವಿಶಿಷ್ಟ ಪಾರಂಪರಿಕ ಪಟ್ಟಿಯಲ್ಲಿಯೂ ಒಂದು. ಕೆಲವು ಜೌಗುಭೂಮಿಯಲ್ಲಿ ತನ್ನದೇ ಪ್ರಾಭಲ್ಯವನ್ನು ಸಾಧಿಸಿದ ಮರವೆಂದರೆ ಹೊಳೆಕೌಲು ಮರ (Syzigium travencorium) ಗಗನದೆತ್ತರಕ್ಕೆ ಬೆಳೆಯುವ ಈ ಮರವು ಲಾನ್ ನಂತಹ ತನ್ನ ಬೇರಿನ ರಚನೆಯೊಂದಿಗೆ ಸಂಪೂರ್ಣ ನೀರಿನ ಹರಿವನ್ನ ತಡೆಹಿಡಿದು ವಿಶಿಷ್ಟ ಭೂಪ್ರದೇಶವನ್ನೇ ಸೃಷ್ಟಿಸಿರುತ್ತದೆ.

ರುದ್ರಾಕ್ಷಿ ಕುಟುಂಬಕ್ಕೆ ಸೇರಿದ ನಂಜಿನ ಮರ ಅಥವಾ ನೀರತ್ತಿಮರ (Eleocarpus tuberculetus) ಮರವು ತನ್ನ ಅಗಲವಾದ ಬೇರಿನ ರಚನೆಯೊಂದಿಗೆ ನೀರಿನ ಹರಿವನ್ನು ತಡೆದಿರುತ್ತದೆ. ಮಳೆಗಾಲದಲ್ಲಿ ಎಲೆ ಉದುರಿಸುವ ಈ ಮರದ ಗುಣವು ತನ್ನ ಒಡಲ ಬುಡದಲ್ಲಿ ಕುರುಚಲು ಸಸ್ಯಗಳು ಬೆಳೆಯುವುದಕ್ಕೆ ಸಹಕಾರಿಯಾಗಿದೆ. ಹೆಚ್ಚಾಗಿ ಪಾಂಡವರ ಅಡಿಕೆ ಗಿಡಗಳು ಹೆಚ್ಚಾಗಿ ಬೆಳೆಯುತ್ತವೆ.

ಸಾಮಾನ್ಯವಾಗಿ ಜೌಗುಭೂಮಿಯಲ್ಲಿ ಬೆಳೆಯುವ ಮರಗಳು ಮೃಧುಕಾಂಡದಾಗಿದ್ದು ಮರವು ಬಿದ್ದ ಕೆಲವೇ ವರ್ಷಗಳಲ್ಲಿ ಮಣ್ಣಿಗೆ ಸೇರಿಹೋಗಿರುತ್ತದೆ. ಜೌಗು ಭೂಮಿಯ ನೆಲವು ಉಳಿದ ಕಾಡಿಗೆ ಹೋಲಿಸಿದರೆ ಹೆಚ್ಚಿನ ಜೈವಿಕ ಪದಾರ್ಥವನ್ನು ಹೊಂದಿದ್ದು ಫಲವತ್ತತೆಯು ಹೆಚ್ಚಾಗಿರುತ್ತದೆ. ಹಾಗಾಗಿ ಮಲೆನಾಡಿನಲ್ಲಿ ಕಂಡುಬರುವ ಬಹಳಷ್ಟು ಅಡಿಕೆ ತೋಟಗಳು ಜೌಗುಭೂಮಿಯನ್ನು ಪರಿವರ್ತಿಸಿ ಮಾಡಲ್ಪಟ್ಟಿವೆ.

ಮಲೆನಾಡಿನ ಕಣಿವೆಗಳಲ್ಲಿ ಬಿದ್ದುಹರಿಯುವ ನೀರು ಸಮತಟ್ಟಾದ ಪ್ರದೇಶಕ್ಕೆ ಬಂದಾಗ ಅಲ್ಲಿನ ಜೌಗುಮರಗಳು ನೀರಿನ ಹರಿವನ್ನು ತಡೆದು ನೀರನ್ನು ಇಂಗಿಸುವ ಮುಖಾಂತರ ತನ್ನ ಒಡಲೊಳಗೆ ಶೇಖರಣೆ ಮಾಡುವುದರ ಜೊತೆಗೆ ಅಂತರ್ಜಲ ಮಟ್ಟವನ್ನು ಸುಧಾರಿಸುವಲ್ಲಿ ಮುಖ್ಯಪಾತ್ರ ವಹಿಸುತ್ತವೆ. ಅಷ್ಟೇ ಅಲ್ಲ ಸದಾ ಹಸಿರಿನಿಂದ ಕೂಡಿದ್ದು ಮತ್ತು ತೇವಯುಕ್ತ ಮಣ್ಣಿನಲ್ಲಿ ಸಾವಯವ ಪದಾರ್ಥಗಳು ವೇಗವಾಗಿ ಕೊಳೆಯುವುದರಿಂದ ವಾತಾವರಣದ ಹೆಚ್ಚಿನ ಇಂಗಾಲವನ್ನು ಶೇಕರಿಸುತ್ತದೆ. ಈ ಪ್ರಮಾಣವು ಉಳಿದ ಕಾಡುಗಳಿಗೆ ಹೋಲಿಸಿದರೆ 10 ಪಟ್ಟು ಹೆಚ್ಚಾಗಿದೆ.

ಕರ್ನಾಟಕದ ಮಲೆನಾಡಿನಲ್ಲಿ ಕೇವಲ 200 ಹೆಕ್ಟೇರುಗಳಷ್ಟು ಜೌಗು ಭೂಮಿಗಳು ಉಳಿದಿದ್ದು ಅದನ್ನು ರಕ್ಷಿಸಿಕೊಂಡು ಹೋಗುವ ಜವಾಬ್ದಾರಿ ನಮ್ಮದಾಗಿದೆ. ಜಾಗತಿಕವಾಗಿ ಹಲವಾರು ಪ್ರಯೋಜನವನ್ನು ಹೊಂದಿದ್ದು ವಾತಾವರಣ ಬದಲಾವಣೆಯನ್ನು ಸರಿದೂಗಿಸುವಲ್ಲಿ ಮುಖ್ಯಪಾತ್ರವನ್ನು ವಹಿಸುತ್ತದೆ.


ಚಿತ್ರ ಕೃಪೆ: ಕೆ ಪಿ ಧನಂಜಯ್ ಕುಮಾರ್

**ಬಿ.ಎಸ್ ಶ್ರೀಲೋಕ**
ಎಂಎಸ್ಸಿ ವಿದ್ಯಾರ್ಥಿ,
ಪರಿಸರ ವಿಜ್ಞಾನ ವಿಭಾಗ, ಕುವೆಂಪು ವಿಶ್ವವಿದ್ಯಾಲಯ
ಶಂಕರಘಟ್ಟ, ಶಿವಮೊಗ್ಗ